ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

## ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(7) ಪ್ರಾ..ಶಿ ವರ್ಗ: 01/2017-18 ದಿನಾಂಕ:-19/01/2018

: ಜ್ಞಾಪನ :

**ವಿಷಯ:-** 2017-18ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿಗಳು – ಪರಿಷ್ಕೃತ ವೇಳಾ ಪಟ್ಟಿ

**ಉಲ್ಲೇಖ:-** ಈ ಕಛೇರಿ ಜ್ಞಾಪನ ಸಿ3(7) ಪ್ರಾ..ಶಿ ವರ್ಗ: 01/2017-18 ದಿನಾಂಕ 29/12/2017

----*****----

ಉಲ್ಲೇಖಿತ ಜ್ಞಾಪನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಹೊರಡಿಸಲಾಗಿದ್ದ ವೇಳಾಪಟ್ಟಿಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಕೆಳಗಿನಂತೆ ಪರಿಷ್ಕರಿಸಿ ನಿಗದಿಪಡಿಸಿದೆ.

<u>ಪರಿಷ್ಕೃತ ವೇಳಾ ಪಟ್ಟಿ</u> :

<u>ಪ್ರಮುಖವಾದ ಸೂಚನೆ</u> : ಯಾವುದೇ ತಾಲ್ಲೂಕು ಅಥವಾ ಘಟಕದಿಂದ ಹೊರಗೆ ವರ್ಗಾವಣೆ ಹೊಂದಲು ಕೋರಿ ಅರ್ಜಿ ಸಲ್ಲಿಸಬೇಕಾದಲ್ಲಿ ಅಂತಹ ತಾಲ್ಲೂಕು ಅಥವಾ ಘಟಕದಲ್ಲಿ ಮಂಜೂರಾದ ಆಯಾ ವೃಂದದ ಖಾಲಿ ಹುದ್ದೆಗಳು ಶೇಕಡ 20 ರ ಪ್ರಮಾಣಕ್ಕಿಂತ ಖಾಲಿ ಇರತಕ್ಕದ್ದಲ್ಲ ಮತ್ತು ವರ್ಗಾವಣೆ ಕೋರುವ ಘಟಕದಲ್ಲಿ ಯಾವುದೇ ಹೆಚ್ಚುವರಿ ಶಿಕ್ಷಕರು ಇರತಕ್ಕದ್ದಲ್ಲ. ಯಾವುದೇ ಶಾಲೆಯಲ್ಲಿ ಹೆಚ್ಚುವರಿ ಹುದ್ದೆಯಾಗಿದ್ದಲ್ಲಿ ಸದರಿ ಹುದ್ದೆಗೆ ವರ್ಗಾವಣೆಗೊಳಿಸತಕ್ಕದ್ದಲ್ಲ. ಈ ಬಗ್ಗೆ ಉಪನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

| ಕ್ರ.ಸಂ | ವಿವರ | ಪರಿಷ್ಕೃತ ದಿನಾಂಕಗಳು | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತು ಕ್ರಮಗಳು** | | |
| 1 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಅರ್ಜಿಗಳನ್ನು ಕರೆಯಲು ಕ್ರಮ | 29/12/2017 | 1) ಪ್ರಾಥಮಿಕ ಶಿಕ್ಷಣ ನಿರ್ದೇಶಕರು, ಆಯುಕ್ತರ ಕಛೇರಿ, ಬೆಂಗಳೂರು<br>2) ಅಪರ ಆಯುಕ್ತರ ಕಛೇರಿ, ಧಾರವಾಡ<br>3) ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು/ ಆಯುಕ್ತಾಲಯದ ಜಂಟಿ ನಿರ್ಧೇಶಕರು, ಧಾರವಾಡ/ ಆಯುಕ್ತಾಲಯದ ಜಂಟಿ ನಿರ್ದೇಶಕರು, ಗುಲ್ಬರ್ಗಾ<br>5) ಉಪನಿರ್ದೇಶಕರು, ಆಡಳಿತ, ವಿವಿಧ ಜಿಲ್ಲೆಗಳು<br>6) ಕ್ಷೇತ್ರಶಿಕ್ಷಣಾಧಿಕಾರಿಗಳು, ವಿವಿಧ ವಲಯ/ತಾಲ್ಲೂಕು |
| 2. | ವರ್ಗಾವಣೆ ಕೋರುವ ಸರ್ಕಾರಿ ಪ್ರಾಥಮಿಕ ಶಿಕ್ಷಕರ ವೃಂದ, ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಿರುವಂತೆ ಅಂತರ್ಜಾಲದ [on line] ಮೂಲಕ ಇಲಾಖೆ ನಿಗದಿ | 29/12/2017 ರಿಂದ 30/01/2018 | ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ ಶಿಕ್ಷಕರ ವೃಂದ |

| | | | |
|---|---|---|---|
| 7 | "ಎ"ವಲಯದಲ್ಲಿ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು, ವರ್ಗಾವಣೆಗೆ ನಿಗದಿಪಡಿಸಿದ ಮಿತಿಗೊಳಪಟ್ಟ ಸಂಖ್ಯೆಯನ್ನು ಗಮನಿಸಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು | 09/02/2018 ರಿಂದ 17/02/2018 | |
| 8 | 1) ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ<br>2) 'ಎ' ವಲಯದಲ್ಲಿನ ಶಿಸ್ತು ಪ್ರಕರಣಗಳಲ್ಲಿ ಕನಿಷ್ಟ ಸೇವಾ ನಿಯಮಗಳ ಹೊರತು ಅಂತಹ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು. | 16/03/2018 | |
| 9 | ವಲಯವಾರು, ವಿಷಯವಾರು ಖಾಲಿ ಹುದ್ದೆಗಳ ವಿವರಗಳನ್ನು ವೆಬ್‌ಸೈಟ್ ನಲ್ಲಿ ಹಾಗೂ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು | 16/03/2018 | |
| 10 | ನಿಯಮ 21(3) ರನ್ವಯ–ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ಹಮ್ಮಿಕೊಳ್ಳುವುದು | 05/04/2018 ರಿಂದ 07/04/2018 | |
| | **ಕೋರಿಕೆ ವರ್ಗಾವಣೆಗಳು ಮತ್ತು ಪರಸ್ಪರ ವರ್ಗಾವಣೆಗಳ ಮುಂದುವರೆದ ಕ್ರಮಗಳು** | | |
| 11 | ಕೋರಿಕೆ ವರ್ಗಾವಣೆ ಬಯಸಿರುವ ಶಿಕ್ಷಕರ ತಾತ್ಕಾಲಿಕ ಆದ್ಯತಾ ಪಟ್ಟಿ **(ಘಟಕದ ಒಳಗೆ ಮತ್ತು ಘಟಕದ ಹೊರಗೆ)** ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. | 22/02/2018 | 1. ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2ವಿಭಾಗೀಯಸಹನಿರ್ದೇಶಕರು,ಬೆಂಗಳೂರು/ಮೈಸೂರು<br>3 ಸಹನಿರ್ದೇಶಕರು ಅಪರ ಆಯುಕ್ತರಾಲಯ ಧಾರವಾಡ ಹಾಗೂ ಗುಲ್ಬರ್ಗ<br>4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ. |
| 12 | ಪರಸ್ಪರ ವರ್ಗಾವಣೆ ಬಯಸಿರುವ ಶಿಕ್ಷಕರ ತಾತ್ಕಾಲಿಕ ಆದ್ಯತಾ ಪಟ್ಟಿ **(ಘಟಕದ ಒಳಗೆ ಮತ್ತು ಘಟಕದ ಹೊರಗೆ)** ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. | 22/02/2018 | 1. ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2ವಿಭಾಗೀಯ ಸಹನಿರ್ದೇಶಕರು,ಬೆಂಗಳೂರು/ಮೈಸೂರು<br>3 ಸಹನಿರ್ದೇಶಕರು ಅಪರ ಆಯುಕ್ತರಾಲಯ ಧಾರವಾಡ ಹಾಗೂ ಗುಲ್ಬರ್ಗ<br>4. ನಿರ್ದೇಶಕರು ಪ್ರಾಥಮಿಕ ಶಿಕ್ಷಣ. |
| 13 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗಳಿಗೆ ಸಂಬಂಧಿಸಿದ ತಾತ್ಕಾಲಿಕ ಆದ್ಯತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು (ಘಟಕದ ಹೊರಗೆ ಮತ್ತು ಒಳಗೆ) ಸಲ್ಲಿಸಲು ನಿಗಧಿಪಡಿಸಿರುವ ಅವಧಿ | 22/02/2018 ರಿಂದ 02/03/2018 | 1) ಸಂಬಂಧಿಸಿದ ಶಿಕ್ಷಕರು ಹಾಗೂ<br>2) ಕ್ಷೇತ್ರಶಿಕ್ಷಣಾಧಿಕಾರಿಗಳು |

